ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

## ಅಧಿಕೃತ ಜ್ಞಾಪನ

**ವಿಷಯ:** ಶ್ರೀ ಚಿನ್ನಸ್ವಾಮಿ.ಆರ್. ರವರನ್ನು ಶಿಶಿಕ್ಷು ತರಬೇತಿಗೆ ನಿಯೋಜಿಸಿರುವ ಸ್ಥಳವನ್ನು ಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ :** 1. ಈ ಕಛೇರಿ ಪತ್ರ ಸಂಖ್ಯೆ : ಸೆಸ್ಕ್/ತರಬೇತಿ/03/13/2022-23/10568-10595 ದಿನಾಂಕ : 18.08.2022
2. ಶ್ರೀ ಚಿನ್ನಸ್ವಾಮಿ .ಆರ್. ರವರ ಮನವಿ ಪತ್ರ ದಿನಾಂಕ: 01.09.2022

********

**ಪೀಠಿಕೆ :** 2022-23ನೇ ಸಾಲಿನ ಶಿಶಿಕ್ಷು ತರಬೇತಿಗೆ ಅರ್ಜಿ ಸಲ್ಲಿಸಿ, NATS ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ಆಯ್ಕೆಪಟ್ಟಿಯನ್ವಯ ಆಯ್ಕೆಯಾಗಿರುವ ಶ್ರೀ ಚಿನ್ನಸ್ವಾಮಿ .ಆರ್. ರವರನ್ನು ಉಲ್ಲೇಖ ಪತ್ರ (1)ರನ್ವಯ O&M Division Office, VV Mohalla ಗೆ ನಿಯೋಜಿಸಿ, ಮೊದಲಿಗೆ ನಿಗಮ ಕಛೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು. ಅದರಂತೆ, ಶ್ರೀ ಚಿನ್ನಸ್ವಾಮಿ .ಆರ್. ರವರು ದಿನಾಂಕ : 01.09.2022ರಂದು ನಿಗಮ ಕಛೇರಿಯಲ್ಲಿ ವರದಿ ಮಾಡಿಕೊಂಡಿರುತ್ತಾರೆ.

ವರದಿ ಮಾಡಿಕೊಂಡ ನಂತರ ತಾವು ನಂಜನಗೂಡು ತಾಲೂಕಿನ ಕಾರೇಮೋಳೆ ಗ್ರಾಮದ ನಿವಾಸಿಯಾಗಿದ್ದು, ವಿವಿ ಮೊಹಲ್ಲಾ ವಿಭಾಗ ಕಛೇರಿಯು ತಮ್ಮ ವಾಸಸ್ಥಳದಿಂದ ಸರಿಸುಮಾರು 60 ಕಿ.ಮೀ.ಗಳ ದೂರದಲ್ಲಿರುವುದರಿಂದ ತಮಗೆ ನೀಡಲಾಗುವ ರೂ. 9,000/- ಶಿಷ್ಯವೇತನದಲ್ಲಿ ತಮ್ಮ ದಿನನಿತ್ಯದ ಖರ್ಚುಗಳನ್ನು ನೀಗಿಸಲು ಸಾಧ್ಯವಾಗುವುದಿಲ್ಲವೆಂದು ವಿವರಿಸಿ, ತಮ್ಮ ವಾಸಸ್ಥಳದಿಂದ 15 ಕಿ.ಮೀ. ದೂರದಲ್ಲಿರುವ ಕಾರ್ಯ ಮತ್ತು ಪಾಲನಾ ಚಾಮರಾಜನಗರ ವಿಭಾಗ ಕಛೇರಿಗೆ ತಮ್ಮನ್ನು ನಿಯೋಜಿಸಿಕೊಡಬೇಕೆಂದು ತಿಳಿಸಿ ಉಲ್ಲೇಖ (2)ರ ಮನವಿ ಪತ್ರದಲ್ಲಿ ಕೋರಿರುತ್ತಾರೆ.

2022-23ನೇ ಸಾಲಿನಲ್ಲಿ ಒಟ್ಟು 28 ಮಂದಿ ಶಿಶಿಕ್ಷುಗಳನ್ನು ಶಿಶಿಕ್ಷು ತರಬೇತಿಗಾಗಿ ಆಯ್ಕೆ ಮಾಡಿ ಚಾವಿಸನಿನಿಯ ವಿವಿಧ ಕಛೇರಿಗಳಲ್ಲಿ ತರಬೇತಿಗಾಗಿ ನಿಯೋಜಿಸಲಾಗಿದ್ದು, ಚಾಮರಾಜನಗರ ವಿಭಾಗ ಕಛೇರಿಗೆ ಯಾರನ್ನೂ ನಿಯೋಜಿಸಿರುವುದಿಲ್ಲ.

ಸದರಿಯವರ ಉಲ್ಲೇಖ ಪತ್ರ (2)ರ ಕೋರಿಕೆಯಂತೆ, ಅವರನ್ನು ಚಾಮರಾಜನಗರ ವಿಭಾಗ ಕಛೇರಿಗೆ ನಿಯೋಜಿಸಲು ಮೇಲಾಧಿಕಾರಿಗಳು ಅನುಮೋದನೆಯನ್ನು ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಕ್ರಮಾಂಕ: ಸೆಸ್ಕ್/ತರಬೇತಿ/03/13/2022-23/ 12494-95 ದಿನಾಂಕ: 13 SEP 2022

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ 2022-23ನೇ ಸಾಲಿನ ಒಂದು ವರ್ಷದ ಅವಧಿಯ ಪದವೀಧರ ಶಿಶಿಕ್ಷು ತರಬೇತಿಗೆ ಆಯ್ಕೆಯಾಗಿರುವ ಶ್ರೀ ಚಿನ್ನಸ್ವಾಮಿ .ಆರ್. ರವರನ್ನು ಉಲ್ಲೇಖ (1)ರನ್ವಯ ನಿಯೋಜಿಸಲಾಗಿದ್ದ ಕಾರ್ಯ ಮತ್ತು ಪಾಲನಾ ವಿಭಾಗ ಕಛೇರಿ, ವಿ.ವಿ. ಮೊಹಲ್ಲಾಗೆ ಬದಲಾಗಿ ಅವರ ಸ್ವಂತ ಕೋರಿಕೆಯಂತೆ "ಕಾರ್ಯ ಮತ್ತು ಪಾಲನಾ ವಿಭಾಗ ಕಛೇರಿ, ಚಾಮರಾಜನಗರ" ದಲ್ಲಿ ತರಬೇತಿ ಪಡೆಯಲು ನಿಯೋಜಿಸಲಾಗಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿದೆ.

(ಸಹಿ)
**ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)**
**ಚಾವಿಸನಿನಿ, ಮೈಸೂರು.**

**ಪ್ರತಿಗಳು:**

- ಮುಖ್ಯ ಇಂಜಿನಿಯರ್ (ವಿ), ಕಾ & ಪಾ ವಲಯ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

- ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು ಮತ್ತು ಚಾ.ನಗರ-ಕೊಡಗು ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ವಿ.ವಿ. ಮೊಹಲ್ಲಾ ಮತ್ತು ಚಾಮರಾಜನಗರ ಚಾವಿಸನಿನಿ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಅಧಿಕಾರಿ ರವರ ಆಪ್ತ ಕಾರ್ಯದರ್ಶಿಯವರಿಗೆ ಅಧಿಕೃತ ಜ್ಞಾಪನಾ ಪತ್ರವನ್ನು ಕಳುಹಿಸುತ್ತಾ, ಪತ್ರದಲ್ಲಿನ ಅಂಶಗಳನ್ನು ಮಾನ್ಯ ವ್ಯ.ನಿ/ನಿ(ತಾಂ)/ಮು.ಆ.ಅ ರವರ ಗಮನಕ್ಕೆ ತರಲು ಕೋರಿದೆ.
- ಉಪ್ರವ್ಯ, MIS ಶಾಖೆ, ನಿಗಮ ಕಾರ್ಯಾಲಯ, ಮೈಸೂರವರ ಮಾಹಿತಿಗಾಗಿ & ನಿಗಮದ WEBSITE ನಲ್ಲಿ UPLOAD ಗಾಗಿ.
- ಕಛೇರಿ ಪ್ರತಿ/ಮು.ಕ.